


ಧರ್ಮಸೂಕ್ಷ್ಮ ಜವರಾಯನ ಕಂಗೆಡಿಸುವುದಿಲ್ಲ. ಆತ ಹೇಳುತ್ತಾನೆ: 'ರಂಡೇರು ಮಿಂಡೇರು ಎಂದಿದ್ರೂ ನಮ್ಗೇರು / ಗಂಡಾನ ಮಡದಿ ನಡೆ ಮುಂದೆ.' ಅಲ್ಲಿಗೆ ಹಾಡು ಮುಗಿಯುತ್ತದೆ; ಹೆಣ್ಣುಮಗಳ ಅನುನಯದ ಮಾತುಗಳು ಸೋತು ಆಕೆ ಜವರಾಯನ ಪಾಶವಶಳಾಗಿರಬೇಕು.

ಈಗ ಆ ಹೆಣ್ಣುಮಗಳ ಸ್ಥಾನದಲ್ಲಿ ನಮ್ಮನ್ನು ಕಲ್ಪಿಸಿಕೊಳ್ಳೋಣ. ಆಕೆ ಕೇಳುವ ಪ್ರಶ್ನೆಗಳು ನಮ್ಮವೂ ಹೌದಲ್ಲವೆ? ಹೆಗಲೇರಿದ ಹೊಣೆಗಾರಿಕೆಗಳಿನ್ನೂ ಮುಗಿಯದಿರುವ ವಯಸ್ಸಿನಲ್ಲಿ ಸಾವಿನ ನೆರಳು ಕಾಣಿಸಿದರೆ, 'ಈ ಸಾವು ನ್ಯಾಯವೆ?' ಎನ್ನುವ ಪ್ರಶ್ನೆ ಉಂಟಾಗುವುದು ಸಹಜ. ಈ ಜಿಜ್ಞಾಸೆಯಲ್ಲಿ ನಮ್ಮ ಪ್ರಶ್ನೆಗಳಿಗೆ ಉತ್ತರಿಸಬೇಕಾದ ಜವರಾಯನ ಸ್ಥಾನದಲ್ಲಿ ಯಾರನ್ನು ಕಲ್ಪಿಸಿಕೊಳ್ಳುವುದು? ಕೊರೊನಾ ವೈರಾಣುವನ್ನೇ? ವ್ಯವಸ್ಥೆಯನ್ನೇ ಅಥವಾ ವ್ಯವಸ್ಥೆಯ ರೂಪವಾದ ಪ್ರಜಾಪ್ರತಿನಿಧಿಗಳನ್ನೇ? ವೈರಾಣುವಿನೊಂದಿಗಂತೂ ಮಾತುಕತೆ ಸಾಧ್ಯವಿಲ್ಲ. ಇನ್ನು ನಮ್ಮ ಪ್ರತಿನಿಧಿಗಳ ಕೆಲವು ಉತ್ತರಗಳನ್ನು ನೋಡಿ. ಪಡಿತರ ಅಕ್ಕಿ ಕಡಿತಗೊಳಿಸಿರುವ ಸರ್ಕಾರದ ನಿರ್ಧಾರದಿಂದ ಆತಂಕಗೊಂಡ ರೈತರೊಬ್ಬರು, 'ನಾವು ಉಪವಾಸ ಇರೋದಾ ಅಥವಾ ಸತ್ತುಹೋಗೋದಾ' ಎಂದು ಕೇಳಿದರೆ, 'ಸತ್ತುಹೋದರೆ ಒಳ್ಳೆಯದು' ಎನ್ನುವುದು ಸಚಿವರ ಉತ್ತರ. ಲಸಿಕೆ ಕೊರತೆಯ ಬಗ್ಗೆ ಪ್ರಶ್ನಿಸಿದರೆ, 'ಲಸಿಕೆ ಉತ್ಪಾದನೆ ಆಗದಿದ್ದರೆ ನಾವು ನೇಣು ಹಾಕಿಕೊಳ್ಳಬೇಕಾ?' ಎನ್ನುವುದು ಕೇಂದ್ರ ಸಚಿವರ ಮರುಪ್ರಶ್ನೆ. ಮತ್ತೊಬ್ಬ ಸಚಿವರು, 'ನಾವೇನು ನೋಟು ಪ್ರಿಂಟ್ ಮಾಡ್ತೀವಾ?' ಎಂದು ಕೇಳುತ್ತಾರೆ. ಕೊರೊನಾ ನಿರ್ವಹಣೆಗೆ ಸಂಬಂಧಿಸಿದಂತೆ ನ್ಯಾಯಪೀಠಗಳು ಸರ್ಕಾರವನ್ನು ಪ್ರಶ್ನಿಸಿದರೆ, 'ನ್ಯಾಯಾಧೀಶರು ಸರ್ವಜ್ಞರಲ್ಲ' ಎಂದು ರಾಜಕಾರಣಿಯೊಬ್ಬರು ಜಾಣತನ ಪ್ರದರ್ಶಿಸುತ್ತಾರೆ.



ಪ್ರಜಾಪ್ರತಿನಿಧಿಗಳಿಗಳಂತೆ ಜವರಾಯ ನಮ್ಮನ್ನು ಪ್ರಶ್ನಿಸುವುದಿಲ್ಲ, ಸಬೂಬು ಹೇಳುವುದಿಲ್ಲ, ಸಾವಿನ ಹೊರತು ಬೇರೆ ಆಯ್ಕೆಗಳನ್ನೇ ಕೊಡುವುದಿಲ್ಲ. ಆ ನಿಟ್ಟಿನಲ್ಲಿ ಪ್ರಜಾ ಪ್ರತಿನಿಧಿಗಳು ಭಿನ್ನ. ಅವರು ನಮ್ಮ ಬದುಕುವ ಹಕ್ಕನ್ನು ಕಿತ್ತುಕೊಂಡಿಲ್ಲ. ಬದುಕು ಸಾವಿಗಿಂತಲೂ ಘೋರವೆನ್ನಿಸಿದಾಗ ಅದರ ಬಗ್ಗೆ ತಲೆ ಕೆಡಿಸಿಕೊಂಡೂ ಇಲ್ಲ. ಜೀವರಕ್ಷಕ ಔಷಧಿಗಳು ಕಾಳಸಂತೆಯಲ್ಲಿ ಮಾರಾಟವಾಗುತ್ತವೆ. ಆಸ್ಪತ್ರೆಗಳಲ್ಲಿ ಹಾಸಿಗೆ ದೊರಕಿಸಿಕೊಡುವ ದಂಧೆ ನಡೆಯುತ್ತದೆ. ಆಮ್ಲಜನಕದ ಕೊರತೆಯಿಂದ ಆಸ್ಪತ್ರೆಗಳಲ್ಲಿ ಜನ ಉಸಿರುಗಟ್ಟಿ ಸಾಯುತ್ತಾರೆ; ರೋಗಭಯದಿಂದ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ; ನದಿಗಳಲ್ಲಿ ಹೆಣಗಳು ತೇಲುತ್ತವೆ. ಆದರೆ, ಪ್ರಜಾಪ್ರಭುತ್ವವನ್ನು ಉಸಿರಾಡಿಸುವ ಜವಾಬ್ದಾರಿ ಹೊತ್ತಿರುವ ನಾಯಕರಿಗೆ ಕಣ್ಣಮುಂದಿನ ಸಾವುಗಳು ಕಿಂಚಿತ್ತೂ ಪಾಪಪ್ರಜ್ಞೆ ಹುಟ್ಟಿಸಿದಂತೆ ಕಾಣಿಸುತ್ತಿಲ್ಲ. ಸೋಂಕಿನ ಆತಂಕದ ನಡುವೆಯೂ ರಾಜಧಾನಿ ದೆಹಲಿಯ ಹೊರವಲಯದಲ್ಲಿ ರೈತರು ಆರು ತಿಂಗಳಿಂದ ಪ್ರತಿಭಟನೆ ನಡೆಸುತ್ತಿದ್ದರೂ ಅವರ ಬಳಿ ಹೋಗಿ ಅಹವಾಲು ಆಲಿಸಲು, ಅನುನಯಿಸಲು ಸವುಡು ದೊರೆತಿಲ್ಲ.

ಹಿಂದೆ ಸಾವುನೋವು ಸಂಭವಿಸಿದಾಗ ಅಧಿಕಾರದಲ್ಲಿ ಇರುವವರು ಪಾಪಪ್ರಜ್ಞೆ ಅನುಭವಿಸುತ್ತಿದ್ದರು. ದುರಂತಗಳ ನೈತಿಕಹೊಣೆ ಹೊತ್ತು ಅಧಿಕಾರ ತ್ಯಜಿಸಿದವರ ಉದಾಹರಣೆಗಳಿವೆ. ಈಗ ರಾಜಕಾರಣದ ವ್ಯಾಖ್ಯೆ ಬದಲಾಗಿದೆ. ರಾಜಕಾರಣವೆಂದರೆ, ಚುನಾವಣೆಯಲ್ಲಿ ಗೆಲ್ಲುವುದು ಹಾಗೂ ಹೇಗಾದರೂ ಮಾಡಿ ಅಧಿಕಾರ ಹಿಡಿಯುವುದು. ದುರಂತಗಳು ಸಂಭವಿಸಿದಾಗ ಅಧಿಕಾರ ತ್ಯಜಿಸುವ ಮಾತಿರಲಿ, ಕಣ್ಣೆದುರು ಸಂಭವಿಸುತ್ತಿರುವ ಸಾವುಗಳನ್ನು ಒಪ್ಪಿಕೊಳ್ಳುವುದೂ ಇಂದಿನ ಪ್ರಜಾಪ್ರತಿನಿಧಿಗಳಿಗೆ ಒಗ್ಗದ ಸಂಗತಿ. ಆಡಳಿತ ಮತ್ತು ವಿರೋಧ ಪಕ್ಷಗಳು ವೈಫಲ್ಯದ ಹೊಣೆಗಾರಿಕೆಯನ್ನು ಪರಸ್ಪರ ವರ್ಗಾಯಿಸುವ ಕೆಲಸದಲ್ಲಿ ತೊಡಗಿವೆ. ಸಾವಿನ ಸರಣಿಯ ಹಿನ್ನೆಲೆಯಲ್ಲಿ ಇರಬಹುದಾದ ಸಾರ್ವಜನಿಕರ ಪಾತ್ರವನ್ನು ವಿಶ್ಲೇಷಿಸಿ ಉತ್ತರದಾಯಿತ್ವದಿಂದ ನುಣುಚಿಕೊಳ್ಳಲಾಗುತ್ತದೆ. 'ಇದೆಲ್ಲ ವಿಧಿಲಿಖಿತ, ವಿಧಿ ವಿಪರೀತ' ಎಂದು ಭಾವಿಸಿ, ದುರ್ಬರ ಕಾಲವನ್ನೂ ಸುಗ್ಗಿಯನ್ನಾಗಿಸಿಕೊಂಡಿರುವ ರಂಡೇರು ಮಿಂಡೇರ ಭಾಗ್ಯವನ್ನು ಕಂಡು ಜನಸಾಮಾನ್ಯ ನಿಟ್ಟುಸಿರುಬಿಡುವಂತಿಲ್ಲ. ವಿಧಿಯ ಮಾತನ್ನೂ ಪ್ರಜಾಪ್ರತಿನಿಧಿಗಳೇ ಆಡುತ್ತಿದ್ದಾರೆ. ಪುನರ್ಜನ್ಮದ ಪರಿಕಲ್ಪನೆ ತೇಲಿಬಿಡಲಾಗುತ್ತದೆ. ಕೊನೆಗೆ ನಮಗೆ ಉಳಿಯುವುದೇನು? ನಮ್ಮ ತಲೆ, ನಮ್ಮ ಕೈ ಎನ್ನುವುದು ಕ್ಲೀಷೆಯ ಮಾತಾದರೂ, ಪ್ರಸ್ತುತ ಸಂದರ್ಭಕ್ಕೆ ಒಗ್ಗುವ ಮತ್ತೊಂದು ಮಾತು ನೆನಪಾಗುತ್ತಿಲ್ಲ.

ಒಳ್ಳೊಳ್ಳೆಯ, ಫಲಬಿಟ್ಟ ಸಾಕಷ್ಟು ಮರಗಳನ್ನು ಕಡಿದ ನಂತರವೂ ಜವರಾಯ ಈಗಲೂ ನಮ್ಮ ನಡುವೆಯಿದ್ದಾನೆ. ಅವನ ರೂಪದಲ್ಲಿ ಕಾಣಿಸಿಕೊಳ್ಳಲು, ಅವನ ಪೋಷಾಕು ತೊಡಲು ಸಾಕಷ್ಟು ಸ್ಪರ್ಧೆಯೂ ನಡೆದಿದೆ. ಆ ಜವರಾಯ ಗೃಹಿಣಿಗೆ ಪ್ರಶ್ನೆಗಳನ್ನು ಕೇಳಲು ಅವಕಾಶ ಕೊಟ್ಟ. ಇಂದಿನದು ಪ್ರಶ್ನೆಗಳನ್ನು ನಿಷೇಧಿಸಲಾಗಿರುವ ಸಂದರ್ಭ.

ಪ್ರತಿಕ್ರಿಯಿಸಿ: feedback@sudha.co.in